ದಿನಾಂಕ: 10.06.2022 ರಂದು ಮಧ್ಯಹ್ನಾ 3.00 ಗಂಟೆಗೆ ಬಸವೇಶ್ವರನಗರ ವಾರ್ಡ್ ನಂ. 100 ರಲ್ಲಿ ಶ್ರೀ ಧ್ರುವರಾಜ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಧ್ರುವರಾಜ್, ನೋಡಲ್ ಅಧಿಕಾರಿಗಳು
2. ಶ್ರೀ ಪವನ್.ಆರ್.ಜಿ, ಸಹಾಯಕ ಅಭಿಯಂತರರು, ವಾರ್ಡ್ ನಂ. 100
3. ಶ್ರೀ ಸುಭಾಶ್ ಪಾಟೀಲ್, ಸಹಾಯಕ ಅಭಿಯಂತರರು, ವಾರ್ಡ್ ನಂ. 100
4. ಶ್ರೀ ಮಂಜುನಾಥ್, ತೋಟಗಾರಿಕೆ ಇಲಾಖೆ, ಬಿ.ಬಿ.ಎಂ.ಪಿ.
5. ಶ್ರೀ ಎಸ್.ಎನ್. ಕಬಾಲಿ, ಪಿ.ಎಸ್.ಐ.
6. ಶ್ರೀ ವಿಧ್ಯಾದರ್, ಸಂಚಾರಿ ಪೋಲಿಸ್
7. ಶ್ರೀ ಕೆ.ಪಿ. ನಾಗೇಶ್.ಎ.ಎಸ್.ಐ.
8. ಶ್ರೀ ಘನತ್ಯಾಜ್ಯ ನಿರ್ವಾಹಕರು
9. ಶ್ರೀಮತಿ ಸಂಧಾ ಹಿರಿಯ ಆರೋಗ್ಯ ಪರಿವೀಕ್ಷಕರು
10. ಶ್ರೀ ಗಿರೀಶ್, ವಾರ್ಡ್ ಅಧ್ಯಕ್ಷರು,
11. ಶ್ರೀಮತಿ ಚಂದ್ರಕಲಾ, ಕ್ರಾಫ್ಟ್ ಉಪಾಧ್ಯಾಯರು
12. ಶ್ರೀ ದರ್ಶನ್, ಮಾರ್ಷಲ್
13. ಶ್ರೀ ಬಸವರಾಜು, ಬೀದಿ ದೀಪ ನಿರ್ವಹಣೆ

ದಿನಾಂಕ: 10.06.2022 ರಂದು ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ನಂ. 100 ಬಸವೇಶ್ವರನಗರ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ವಾರ್ಡ್ ಸದಸ್ಯರು ವಿಶ್ವೇಶ್ವರಯ್ಯ ಪಾರ್ಕ್ ಗೇಟ್ ದುರಸ್ಥಿಯ ಬಗ್ಗೆ ಸಭೆಯಲ್ಲಿ ಚರ್ಚಿಸಿದರು. ಇದರ ಬಗ್ಗೆ ಶ್ರೀ ಗಿರೀಶ್ ರವರು ಸರಿಪಡಿಸುವುದಾಗಿ ಸಭೆಯಲ್ಲಿ ನೋಡಲ್ ಅಧಿಕಾರಿಗೆ ತಿಳಿಸಿದರು
2. ವಾರ್ಡ್ ಸದಸ್ಯರು, ಶಂಕರ್ ಮಠ ಸಿಗ್ನಲನ್ನು ಬೇರೆ ಕಡೆಗೆ ಸ್ಥಳಾಂತರ ಮಾಡುವಂತೆ ಸಭೆಯಲ್ಲಿ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ಸಹಾಯಕ ಅಭಿಯಂತರರು, ಪಾದಚಾರಿ ಮಾರ್ಗ ಅಗಲ ಮಾಡಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
3. ಶ್ರೀ ಗಿರೀಶ್ ರವರು , 8ನೇ ಬಿ ಮುಖ್ಯ ರಸ್ತೆ, ಗ್ರೇಟಿಂಗ್ ಅಗಲ ಮಾಡಲು ಚರ್ಚಿಸಿದರು. ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ಸಹಾಯಕ ಅಭಿಯಂತರರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು.
4. ಶ್ರೀ ಗಿರೀಶ್ ರವರು ನೇತಾಜಿ ಪಾರ್ಕ್ ಹತ್ತಿರವಿರುವ ಖಾಲಿ ನಿವೇಶನದಲ್ಲಿ ಸಮುಧಾಯ ಭವನ ನಿರ್ಮಾಣ ಮಾಡಲು ಚರ್ಚಿಸಿದರು. ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
5. ಶ್ರೀ ಗಿರೀಶ್ ರವರು ವಾರ್ಡ್ ನಂ. 100 ಕಟ್ಟಡವನ್ನು ನೆಲಸಮ ಮಾಡುವ ಬಗ್ಗೆ ಹಾಗೂ ವಾರ್ಡ್ ಕಛೇರಿಯ ಬೋರ್ ಕೆಟ್ಟು ಹೋಗಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ಸಹಾಯಕ ಅಭಿಯಂತರರು ಟೆಂಡರ್ ಆಗಿದೆ ಎಂದು ನೋಡಲ್ ಅಧಿಕಾರಿಗಳಿಗೆ ತಿಳಿಸಿದರು.
6. ವಾರ್ಡ್ ಸದಸ್ಯರು ನೇತಾಜಿ ಪಾರ್ಕ್ ಹತ್ತಿರವಿರುವ ರಾಜ ಕಾಲುವೆಯ ಪಕ್ಕ ಕಸ ತೆಗೆಯಲು ಚರ್ಚಿಸಿದರು ಹಾಗೂ ರಸ್ತೆಯಲ್ಲಿ ಗ್ರಿಲ್ ಅಳವಡಿಸಿರುವ ಕಾರಣ ರಸ್ತೆ ಅಗಲ ಕಡಿಮೆಯಾಗಿದ್ದು, ಬಿ.ಎಂ.ಟಿ.ಸಿ. ಬಸ್ ಓಡಾಡಲು ಅಡಚಣೆ ಉಂಟಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.
7. ಶ್ರೀಮತಿ ಸಂಧ್ಯಾ , ಹಿ.ಆ.ಪ. ಆರ್.ಓ. ಘಟಕದ ನೀರಿನ ಮಾದರಿಯನ್ನು ತೆಗೆಯಲು ತಿಳಿಸಿದರು. ಇದಕ್ಕೆ ಉತ್ತರವಾಗಿ ಸಹಾಯಕ ಅಭಿಯಂತರರು, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
8. ವಾರ್ಡ್ ಸದಸ್ಯರು ಹಾಗೂ ನೋಡಲ್ ಅಧಿಕಾರಿಗಳು ಒಣ ಕಸ ಕಾಂಪೋಸ್ಟ್ ಮಾಡುವುದರ ಬಗ್ಗೆ ಸಭೆಯಲ್ಲಿ ಚರ್ಚಿಸಿದರು ಇದಕ್ಕೆ ಉತ್ತರವಾಗಿ ವಾರ್ಡ್ ಅಭಿಯಂತರರು ನೇತಾಜಿ ಹಾಗೂ ಕುವೆಂಪು ಪಾರ್ಕ್‌ಗಳ ಸಿವಿಲ್ ಕಾಮಗಾರಿಗಳನ್ನು ಶೀಘ್ರವೇ ಕೈಗೊಂಡು ಅದರ ಜೊತೆ ಕಾಂಪೋಸ್ಟ್ ಮಾಡುವ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು

ಪು.ತಿ.ನೋ.

9. ವಾರ್ಡ್ ಸದಸ್ಯರು ಪಾರ್ಕ್ ಗಳಲ್ಲಿ ಸೊಳ್ಳೆ ಕಾಟ ಜಾಸ್ತಿಯಾಗಿದ್ದು, ಹಿರಿಯ ನಾಗರೀಕರಿಗೆ ಹಾಗೂ ಚಿಕ್ಕ ಮಕ್ಕಳಿಗೆ ತೊಂದರೆಯಾಗುತ್ತಿದ್ದು, ಸೊಳ್ಳೆ ನಿಯಂತ್ರಣಕ್ಕಾಗಿ ಔಷಧಿ ಸಿಂಪಡಣೆ ಮಾಡಿಸುವಂತೆ ಕೋರಿದರು. ಇದಕ್ಕೆ ಉತ್ತರವಾಗಿ ಶ್ರೀಮತಿ ಸಂಧ್ಯಾ ರವರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

10. ನೋಡಲ್ ಅಧಿಕಾರಿಗಳು ಆರೋಗ್ಯಾಧಿಕಾರಿಗಳ ಜೊತೆ ಕೋವಿಡ್ 3 ಮತ್ತು 4ನೇ ಅಲೆಯ ಬಗ್ಗೆ ಚರ್ಚಿಸಿದರು. ಹಾಗೂ 3ನೇ ಮತ್ತು 4ನೇ ಅಲೆಯ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವಂತೆ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ಈಗಾಗಲೇ ಸಾರ್ವಜನಿರಿಗೆ ಅರಿವು ಮೂಡಿಸಲಾಗುತ್ತಿರುತ್ತದೆ.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 100